ಉಪಾಧ್ಯಾಯರುಗಳನ್ನು ಅಥವಾ ಅಗತ್ಯವಾದ ಉಪಾಧ್ಯಾಯರುಗಳನ್ನು ನೇಮಕ ಮಾಡುವುದಕ್ಕೆ ಸ್ವಲ್ಪ ತೊಂದರೆ ಇರುವುದರಿಂದ ಪಕ್ಕದ ಪಾಂಡವಪುರ ಕಾಲೇಜಿನಲ್ಲಿ ಟೀಚರ್ಸ್‌ಗೆ ಅಷ್ಟು ವರ್ಕ್‌ಲೋಡ್ ಇಲ್ಲ, ಆದ್ದರಿಂದ ಅವರನ್ನು ವಾರಕ್ಕೆ ಮೂರು ದಿವಸ ಇಲ್ಲಿ ಪಾಠ ಮಾಡುವ ವ್ಯವಸ್ಥೆ ಮಾಡಿ, ಅಷ್ಟರೊಳಗೆ ಇಲ್ಲಿಗೆ ಆ ಶಿಕ್ಷಕರನ್ನು ತುಂಬುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಬಿ. ಚಂದ್ರಶೇಖರ್ :- ಮಾನ್ಯ ಅಧ್ಯಕ್ಷರೇ, ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ 6 ಹೋಬಳಿಗಳು ಇವೆ. ಅಲ್ಲಿ ಜೂನಿಯರ್ ಸೈನ್ಸ್ ಕಾಲೇಜು ಇರತಕ್ಕಂಥಾದ್ದು ಒಂದೇ ಒಂದು. ಸೈನ್ಸ್ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಕೊಡತಕ್ಕಂಥಾದ್ದು ನಮ್ಮೆಲ್ಲರ ಕರ್ತವ್ಯ ಎಂದು ನಾನು ಭಾವಿಸಿದ್ದೇನೆ. ಆದ್ದರಿಂದ ತಾವು ಇಂತಹ ಒಂದು ಶಾಲೆಗಳಿಗೆ ಅಡಿಷನಲ್ ಸೆಕ್ಷನ್ ಆಗಿರಬಹುದು ಮತ್ತು 1800 ಜನ ವಿದ್ಯಾರ್ಥಿಗಳು ಜೂನಿಯರ್ ಕಾಲೇಜಿನಲ್ಲಿ ಓದುತ್ತಿದ್ದಾರೆ ಇದರಲ್ಲಿ, ಸುಮಾರು 52 ಪರ್ಸೆಂಟ್‌ನಷ್ಟು ಹೆಣ್ಣು ಮಕ್ಕಳು ಆ ಜೂನಿಯರ್ ಕಾಲೇಜಿನಲ್ಲಿ ಓದುತ್ತಿರುವಂತಹ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ಒಂದು ಜೂನಿಯರ್ ಕಾಲೇಜು ಗಂಡು ಮಕ್ಕಳಿಗೆ ಒಂದು ಜೂನಿಯರ್ ಕಾಲೇಜು ಎಂದು ಬೈಫರ್‌ಕೇಷನ್ ಮಾಡಿ ಕೊಟ್ಟರೆ ಆ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ಕೊಟ್ಟಂತೆ ಆಗುತ್ತದೆಂದು ಈ ಸಂದರ್ಭದಲ್ಲಿ ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಮನವಿ ಮಾಡುತ್ತೇನೆ.

ಶ್ರೀ ಬಿ.ಕೆ. ಚಂದ್ರಶೇಖರ್ :- ಮಾನ್ಯ ಅಧ್ಯಕ್ಷರೇ, ಆ ವ್ಯವಸ್ಥೆ ಮಾಡುವ ಆಶ್ವಾಸನೆಯನ್ನು ನಾನು ಕೊಡುತ್ತೇನೆ.

ಬೈಲಹೊಂಗಲ ಸಾರ್ವಜನಿಕ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿವರ್ತನೆ ಮಾಡುವುದು

245 (2027) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರವು ಕಂದಾಯ ಪೋಲಿಸ್ ಹಾಗೂ ವಾಣಿಜ್ಯ ಇಲಾಖೆಗಳ ಕೇಂದ್ರ ಸ್ಥಾನವಿದ್ದು, ಈಗಾಗಲೇ ಇಲ್ಲಿರುವ 50 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದೇ;

ಆ) ಈ ಆಸ್ಪತ್ರೆಯಲ್ಲಿ ಮೂಲಭೂತ ಸೌಕರ್ಯಗಳು, ಕುಡಿಯುವ ನೀರು ಹಾಗೂ ಆಸ್ಪತ್ರೆಯನ್ನು ಶುಚಿಯಾಗಿಡಲು ಅವಶ್ಯವಿರುವ ಸಿಬ್ಬಂದಿಯನ್ನು ನೇಮಿಸಲು ಕ್ರಮ ಕೈಗೊಳ್ಳಲಾಗುವುದೇ;

ಇ) ಈ ಆಸ್ಪತ್ರೆಯಲ್ಲಿ ಎಷ್ಟು ದಿನಗಳಿಂದ ಯಾವ ಯಾವ ಹುದ್ದೆಗಳು ಖಾಲಿ ಇರುತ್ತವೆ; ಹಾಗೂ ಅವುಗಳನ್ನು ತುಂಬಲು ಯಾವ ಕ್ರಮವನ್ನು ಕೈಗೊಳ್ಳಲಾಗುವುದು;

ಈ) ಈ ಆಸ್ಪತ್ರೆಗೆ ಯಾವ ಯಾವ ಅಧಿಕಾರಿಗಳು ಯಾವ ದಿನಾಂಕಗಳಂದು ಭೇಟಿ (ವಿಜಿಟ್ ಮಾಡುವರು)?

ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಬೆಳಗಾವಿ ಇವರಿಂದ ಪ್ರಸ್ತಾವನೆ ಬಂದಿತ್ತು.

ಆ) ಹೌದು.

ಇ) ಒಂದು ಹಿರಿಯ ಪ್ರಯೋಗಶಾಲಾ ತಂತ್ರಜ್ಞರ ಹುದ್ದೆ 2 ವರ್ಷಗಳಿಂದ, ಒಂದು ಫಾರ್ಮಾಸಿಸ್ಟ್ ಹುದ್ದೆ 15 ವರ್ಷಗಳಿಂದ ಹಾಗೂ ಎರಡು ಗ್ರೂಪ್ ಡಿ ನೌಕರರ ಹುದ್ದೆ 2 ವರ್ಷಗಳಿಂದ ಖಾಲಿ ಇರುತ್ತದೆ. ಆರೆ ವೈದ್ಯಕೀಯ ಸಿಬ್ಬಂದಿಯನ್ನು ನೇಮಿಸಲು ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸಲಾಗಿದೆ.

ಈ) ಈ ವರ್ಷದಲ್ಲಿ ಭೇಟಿ ನೀಡಿದ ಅಧಿಕಾರಿಗಳ ವಿವರ:

1. ದಿನಾಂಕ: 22.4.2002 ರಂದು - ತಹಸಿಲ್ದಾರ್, ಬಿ.ಇ.ಓ ಮತ್ತು ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಬೈಲಹೊಂಗಲ.
2. ದಿನಾಂಕ: 23.4.2002, 18,5.2002, 30.5.2002 ಮತ್ತು 12.7.2002 ರಂದು - ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಬೆಳಗಾವಿ.
3. ದಿನಾಂಕ: 4.5.2002 ರಂದು - ಅಪರ ನಿರ್ದೇಶಕರು, ಕೆಹೆಚ್ಎಸ್ಡಿಪಿ, ಬೆಂಗಳೂರು.
4. ದಿನಾಂಕ: 19.5.2002 ರಂದು - ಜಿಲ್ಲಾಧಿಕಾರಿಗಳ ಕೇಂದ್ರ ಸಹಾಯಕರು, ಬೆಳಗಾವಿ.
5. ದಿನಾಂಕ: 5.7.2002 ರಂದು - ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯ್ತ, ಬೆಳಗಾವಿ.
6. ದಿನಾಂಕ: 15.7.2002 ರಂದು - ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳು, ಬೆಳಗಾವಿ ಮತ್ತು ಅಪರ ನಿರ್ದೇಶಕರು, ಕೆಹೆಚ್ಎಸ್ಡಿಪಿ, ಬೆಂಗಳೂರು.

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ :- ಮಾನ್ಯ ಅಧ್ಯಕ್ಷರೇ, ಬೈಲಹೊಂಗಲ ಸಾರ್ವಜನಿಕ ಆಸ್ಪತ್ರೆಯನ್ನು ಒಂದು ನೂರು ಹಾಸಿಗೆಗಳ ಆಸ್ಪತ್ರೆಯಾಗಿ ಪರಿವರ್ತಿಸುವುದರ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ ಎಂದು ಕೇಳಿದರೆ ಬಂದಿದೆ ಎಂದು ಹೇಳಿದ್ದಾರೆ. ಆದ್ದರಿಂದ ಇದನ್ನು ಯಾವಾಗ ಮೇಲ್ದರ್ಜೆಗೆ ಏರಿಸುತ್ತೀರಿ ಎಂದು ಹೇಳಬೇಕು. ಇನ್ನು ಎರಡನೆಯದಾಗಿ ಈ ಒಂದು ಆಸ್ಪತ್ರೆಯಲ್ಲಿ ಯಾವ ಯಾವ ಹುದ್ದೆಗಳು ಖಾಲಿ ಇವೆ ಎಂದು ಕೇಳಿದರೆ, ಫಾರ್ಮಸಿಸ್ಟ್ ಹುದ್ದೆ ಕಳೆದ 15 ವರ್ಷಗಳಿಂದ ಹಾಗೂ ಹಿರಿಯ ಪ್ರಯೋಗಶಾಲೆ ತಂತ್ರಜ್ಞರ ಹುದ್ದೆ ಕಳೆದ 2 ವರ್ಷಗಳಿಂದ ಹಾಗೂ ಗ್ರೂಪ್ 'ಡಿ' ನೌಕರರ ಎರಡು ಹುದ್ದೆಗಳು ಈ ರೀತಿ ಅನೇಕ ಹುದ್ದೆಗಳು ಖಾಲಿ ಇವೆ ಎಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಈ ಎಲ್ಲಾ ಹುದ್ದೆಗಳನ್ನು ಯಾವಾಗ ತುಂಬುತ್ತಾರೆಂಬ ಬಗ್ಗೆ ಉತ್ತರ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಇವತ್ತು ಕೊಟ್ಟಂತಹ ಮಾಹಿತಿ ಬಹುಶಃ ತಪ್ಪು ಇದೆ ಎಂದು ನಾನು ಹೇಳುತ್ತೇನೆ. ಏಕೆಂದರೆ ಮಾನ್ಯ ಸಚಿವರು ಕರೆದಂತಹ ಒಂದು ಸಭೆಯಲ್ಲಿ 4 ಡಾಕ್ಟರ್ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದಿರಿ, ಆದರೆ ಅದನ್ನು ಇವತ್ತು ಇಲ್ಲಿ ತೋರಿಸಿಲ್ಲ. ಆದ್ದರಿಂದ ಈ ಎಲ್ಲಾ ಹುದ್ದೆಗಳನ್ನು ಯಾವಾಗ ತುಂಬುತ್ತೀರಿ ಅಂತ ಮಾನ್ಯ ಸಚಿವರಲ್ಲಿ ನಾನು ತಮ್ಮ ಮೂಲಕ ಕೇಳ ಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೇ, ಮೊದಲನೇ ಪ್ರಶ್ನೆಗೆ 50 ಹಾಸಿಗೆಗಳಿಂದ ನೂರು ಹಾಸಿಗೆಗಳಿಗೆ ಏರಿಸುವಂತಹ ವಿಚಾರದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವ ಬಂದಿದೆ. ಆದರೆ ನಮ್ಮವರದಿ ಪ್ರಕಾರ ಅದರ ಅವಶ್ಯಕತೆ ಇಲ್ಲ ಎಂದು ಒಂದು ಭಾಗ ಇದೆ. ಆದ್ದರಿಂದ ಇದನ್ನು ಸಮಗ್ರವಾಗಿ ಪರಿಶೀಲನೆ ನಡೆಸಬೇಕಾಗುತ್ತದೆ. ನಮ್ಮ ಹಣಕಾಸಿನ ವ್ಯವಸ್ಥೆಯನ್ನು ಸಹ ನೋಡಬೇಕಾಗುತ್ತದೆ ಎರಡನೆಯದಾಗಿ, ಖಾಲಿ ಇರುವ ವೈದ್ಯರ ಹುದ್ದೆಗಳನ್ನು ತುಂಬತಕ್ಕಂಥ ಪ್ರಕ್ರಿಯೆ ಈಗ ಪ್ರಾರಂಭವಾಗಿದೆ, ಅದಕ್ಕೆ ನಾನು ಹಿಂದಿನ ಪ್ರಶ್ನೆಗೆ ಉತ್ತರ ಹೇಳಿದ ರೀತಿಯಲ್ಲಿ

ಆದಷ್ಟು ಬೇಗ ತುಂಬತಕ್ಕಂಥ ಕೆಲಸ ಮಾಡುತ್ತೇನೆ. ಆಮೇಲೆ ಈ ಪ್ಯಾರಾ ಮೆಡಿಕಲ್ (ಸಿ) ಗುಂಪಿನ ಹುದ್ದೆಗಳು ಏನು ಇವೆ ಇದನ್ನು ನಾವು ನೇಮಕಾತಿ ಮಾಡಬೇಕಾಗುತ್ತದೆ. ಆ ನೇಮಕಾತಿಯ ಪ್ರಕ್ರಿಯೆಯ ನೋಟಿಫಿಕೇಶನ್ ಅನ್ನು ಒಂದು ವಾರದಲ್ಲಿ ಹೊರಡಿಸುತ್ತೇವೆ. ಆ ಪ್ರಕ್ರಿಯೆ ಆದಮೇಲೆ ಈ ಎಲ್ಲಾ ಹುದ್ದೆಗಳನ್ನು ನಾವು ತುಂಬುತ್ತೇವೆ.

ಆನೇಕಲ್ ಮತಕ್ಷೇತ್ರದ ಆರೋಗ್ಯ ಕೇಂದ್ರದಲ್ಲಿ ನೀರಿನ ಬವಣೆಯನ್ನು ನೀಗಿಸಲು ಕೈಗೊಂಡ ತುರ್ತು ಕ್ರಮಗಳು

246 (2020) ಶ್ರೀ ನಾರಾಯಣ ಸ್ವಾಮಿ ಎ. (ಆನೇಕಲ್) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆನೇಕಲ್ ಮತಕ್ಷೇತ್ರದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕಳೆದ 6 ತಿಂಗಳಿನಿಂದ ನೀರಿನ ಸಮಸ್ಯೆ ಉಲ್ಬಣಿಸಿದ್ದು ದಿನನಿತ್ಯದ ಅವಶ್ಯಕತೆಗಳಿಗೆ ನೀರಿಲ್ಲದ ಪರಿಸ್ಥಿತಿಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ನೀರಿನ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು;

ಇ) ನೀರಿನ ಸಮಸ್ಯೆಯ ಶಾಶ್ವತ ಪರಿಹಾರಕ್ಕೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು;

ಈ) ಆರೋಗ್ಯ ಕೇಂದ್ರದ ಸ್ವಚ್ಛತಾ ಕೆಲಸವನ್ನು ವಾರ್ಷಿಕ ಗುತ್ತಿಗೆಗೆ ನೀಡಿದ್ದು, ಗುತ್ತಿಗೆದಾರು ಸರಿಯಾಗಿ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಗುತ್ತಿಗೆದಾರರ ವಿರುದ್ಧ ಸರ್ಕಾರ:ಇಲಾಖೆಯು ಕೈಗೊಳ್ಳಲಿರುವ ಕಾರ್ಯಕ್ರಮವೇನು?

ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಟ್ಯಾಂಕರ್‌ನಿಂದ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಇ) ಒಂದು ಕೊಳವೆ ಬಾವಿ ಮಂಜೂರು ಮಾಡಲು ಜಿಲ್ಲಾಧಿಕಾರಿಯವರನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ವಿನಂತಿಸಿರುತ್ತಾರೆ.

ಈ) ಬಂದಿರುವುದಿಲ್ಲ. ಕಾರಣ ಆರೋಗ್ಯ ಕೇಂದ್ರದ ಸ್ವಚ್ಛತಾ ಕೆಲಸಗಳನ್ನು ವಾರ್ಷಿಕ ಗುತ್ತಿಗೆದಾರರು ಸರಿಯಾಗಿ ತೃಪ್ತಿಕರವಾಗಿ ನಿರ್ವಹಿಸುತ್ತಿದ್ದಾರೆ.

ಶ್ರೀ ಎ. ನಾರಾಯಣಸ್ವಾಮಿ :- ಮಾನ್ಯ ಅಧ್ಯಕ್ಷರೇ, ಆನೇಕಲ್‌ನಲ್ಲಿ 50 ಹಾಸಿಗೆಗಳ ಆಸ್ಪತ್ರೆ 200 ಲಕ್ಷ ರೂ ವೆಚ್ಚದಲ್ಲಿ ನಿರ್ಮಾಣ ಮಾಡಿದ್ದಾರೆ. ಆ ಆಸ್ಪತ್ರೆಯಲ್ಲಿ ನೀರಿನ ಅವ್ಯವಸ್ಥೆ ಇದೆ. ಬಹುತೇಕ ಹೆಣ್ಣುಮಕ್ಕಳು ಹೆರಿಗೆಗೆ ಹೋದರೆ, ನೀವು 4 ಬಿಂದಿಗೆ ನೀರು ತೆಗೆದುಕೊಂಡು ಬಂದರೆ ಡೆಲಿವರಿ ಮಾಡುತ್ತೇವೆ, ಇಲ್ಲದೇ ಹೋದರೆ ನರ್ಸಿಂಗ್ ಹೋಮ್‌ಗೆ ಹೋಗಿ ಎಂದು ಹೇಳುವ ಪರಿಸ್ಥಿತಿ ಆನೇಕಲ್ ಆಸ್ಪತ್ರೆಯಲ್ಲಿದೆ. ಇಲ್ಲಿರುವ ಒಂದು ಸಮಸ್ಯೆ ಏನೆಂದರೆ, ಆಸ್ಪತ್ರೆಯ ಆವರಣದಲ್ಲಿ ಒಂದು ಓವರ್-ಹೆಡ್-ಟ್ಯಾಂಕ್ ಇತ್ತು. ಇದನ್ನು ಕರ್ನಾಟಕ ಹೆಲ್ತ್ ಸಿಸ್ಟಂನವರು, ಇದರಿಂದ ನಮಗೆ ತೊಂದರೆಯಾಗುತ್ತಿದೆ ಇದನ್ನು ತೆಗೆದುಹಾಕುವುದಕ್ಕೆ ಪರ್ಮಿಷನ್ ಕೊಡಿ ಎಂದು ಟಿ.ಎಂ.ಸಿ. ಯವರನ್ನು ಕೇಳಿದ್ದರು. ಟಿ.ಎಂ.ಸಿ.ಯವರು ಪರ್ಮಿಷನ್ ಕೊಟ್ಟು ಅದನ್ನು ಒಡೆದು ಹಾಕಿದಮೇಲೆ, ಕರ್ನಾಟಕ ಹೆಲ್ತ್ ಸಿಸ್ಟಂನವರು ಆಸ್ಪತ್ರೆಯ ಕಡೆ ಗಮನವನ್ನೇ ಕೊಡಲಿಲ್ಲ. ಈ ಒಂದು ಪರಿಸ್ಥಿತಿ ಆನೇಕಲ್ ನಗರದ ಆಸ್ಪತ್ರೆಯಲ್ಲಿದೆ. ನೀವು ಎಷ್ಟು